ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **08-11-2024**

ಪಾಟಿ ಸವಾಲುಃ ಶ್ರೀ. ಎನ್.ಸಿ.ಸಿ ವಕೀಲರಿಂದ

ನನ್ನ ತಂದೆ ಹೆಸರು ಕಾಳಿಂಗಪ್ಪ ತಾಯಿ ಕೆಂಚಮ್ಮ. ಕಾಳಿಂಗಪ್ಪ ರವರ ತಂದೆ ಮುತ್ತೇಗೌಡ. ಮುತ್ತೇಗೌಡ **5** ಜನ ಅಣ್ಣ ತಮ್ಮಂದಿರು ಎಂದರೆ ಸರಿ. ಅವರೆಂದರೆ ಹೂವಯ್ಯ, ಮಾಚಮ್ಮ, ದೇವಪ್ಪ, ಕುಶಾಲಪ್ಪ ಮತ್ತು ಮುತ್ತೇಗೌಡ. ಈ **5** ಜನರು ನಿಂಗೇಗೌಡ ಎನ್ನುವವರ ಮಕ್ಕಳು ಎಂದರೆ ಸರಿ. ನಿಂಗೇಗೌಡ ರವರಿಗೆ ಸುಬ್ಬೇಗೌಡ ಎಂಬ ತಮ್ಮ ಇದ್ದರು ಎಂದರೆ ಸರಿ. ನಿಂಗೇಗೌಡ ಮತ್ತು ಸುಬ್ಬೇಗೌಡ ಮೂಲ ಸುಬ್ಬೇಗೌಡನ ಮಕ್ಕಳು ಎಂದರೆ ಸರಿ. ಸುಬ್ಬೇಗೌಡರಿಗೆ **4** ಜನ ಮಕ್ಕಳು ಎಂದರೆ ಸರಿ, ಅವರೆಂದರೆ ಸಿದ್ದೇಗೌಡ, ಮಲ್ಲಪ್ಪ, ಮುತ್ತೇಗೌಡ, ಈರಪ್ಪ ಎಂದರೆ ಸರಿ. ಕೊನೆಯ ಮಗ ಈರಪ್ಪನಿಗೆ ಸುಬ್ರಾಯ, ಹೊನ್ನರಾಜಪ್ಪ, ರವೀಂದ್ರ ಎಂಬ ಮಕ್ಕಳಿದ್ದರು ಎಂದರೆ ಸರಿ.

ರವೀಂದ್ರ ಈಗ ಮೃತ ಪಟ್ಟಿರುತ್ತಾರೆ. ಅವರ ಪತ್ನಿ ಹೆಸರು ಸರೋಜ ಇರುತ್ತದೆ. **4** ರಿಂದ **6**ನೇ ಪ್ರತಿವಾದಿಗಳು ರವೀಂದ್ರ ಮತ್ತು ಸರೋಜ ರವರ ಮಕ್ಕಳು ಎಂದರೆ ಸರಿ. ಈ ರೀತಿಯ ವಂಶವೃಕ್ಷ ಇರವುದರಿಂದ **4** ರಿಂದ **6**ನೇ ಪ್ರತಿವಾದಿಗಳು ನಮ್ಮ ಕುಟುಂಬದವರೇ ಎಂದರೆ ಸರಿ. **4** ರಿಂದ **6**ನೇ ಪ್ರತಿವಾದಿಗಳು ಈ ಮೇಲೆ ತಿಳಿಸಿದ ರೀತಿ ದೂರದ ಸಂಬಂಧಿಕರು ಎಂದರೆ ಸರಿ. ದಾವಾ ಆಸ್ತಿಗಳೆಲ್ಲ ಮೂಲ ಸಿದ್ದೇಗೌಡ, ನಿಂಗೇಗೌಡ ರವರಿಂದ ಬಂದಿರುವ ಆಸ್ತಿಗಳು ಎಂದರೆ ಸರಿ. **1988** ರಲ್ಲಿ ಕುಟುಂಬಸ್ಥರು ಸೇರಿಕೊಂಡು ಎಲ್ಲಾ

ಆಸ್ತಿಗಳನು ಪಾಲು ಮಾಡಿಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಸರಿಯಾಗಿ ಗೊತ್ತಿಲ್ಲ ಅವರವರೇ ಮಾಡಿಕೊಂಡಿರುತ್ತಾರೆ. ಆ ರೀತಿ ವಿಭಾಗ ಆದಾಗ ಅಪ್ಪಶೆಟ್ಟಳ್ಳಿ ಗ್ರಾಮದ ಸರ್ವೆ ನಂ.**70/4** ರಲ್ಲಿ **98** ಸೆಂಟ್ ಪೈಕಿ **73** ಸೆಂಟ್ ರವೀಂದ್ರ ರವರ ಪಾಲಿಗೆ ಹೋಗಿದೆ ಎಂದರೆ ಸರಿ. ಉಳಿಕೆ **19** ಸೆಂಟ್ ನನ್ನ ತಂದೆಗೆ ಬಂದಿದೆ ಎಂದರೆ ಸರಿ.

ಆ ರೀತಿ ವಿಭಾಗ ಆಗಿದ್ದರಿಂದ **1988-89** ರಲ್ಲಿ ಮ್ಯುಟೇಶನ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಮ್ಯಟೇಶನ್ ಆದಾಗ ಸರ್ವೆ ನಂ.**70/4** ರಲ್ಲಿ ರವೀಂದ್ರನಿಗೆ **73** ಸೆಂಟು, ಕಾಳಿಂಗಪ್ಪನಿಗೆ **19** ಸೆಂಟ್ ಇದ್ದುದರಿಂದ ರವೀಂದ್ರನಿಗೆ ಖಾತೆ ಮಾಡಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆವತ್ತಿನಿಂದ ಸರ್ವೆ ನಂ.**70/4** ರಲ್ಲಿ **73** ಸೆಂಟ್ ರವೀಂದ್ರನ ಸ್ವಾದೀನ ಮತ್ತು **19** ಸೆಂಟ್ ಕಾಳಿಂಗಪ್ಪನ ಸ್ವಾದೀನ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.**70/4** ಕ್ಕೆ ಯಾವ ಕಾಲದಲ್ಲೂ ಕಾಳಿಂಗಪ್ಪ, ಅವರ ಪತ್ನಿ ಕೆಂಚಮ್ಮ ಪಟ್ಟೆದಾರರಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕಾಳಿಂಗಪ್ಪ ಮರಣದ ನಂತರ ಅವರ ಕುಟುಂಬಕ್ಕೆ ದೊಡ್ಡವರೆಂದರೆ ನನ್ನ ತಾಯಿ ಕೆಂಚಮ್ಮ ಎಂದರೆ ಸರಿ. **19** ಸೆಂಟ್ ಜಾಗ ಕಾಳಿಂಗಪ್ಪ ಮರಣದ ನಂತರ ಅವರ ಪತ್ನಿ ಕೆಂಚಮ್ಮ ರವರ ಸ್ವಾದೀನಕ್ಕೆ ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ರವೀಂದ್ರ ಮರಣದ ನಂತರ ಅವರ ಸ್ವಾದೀನ ಇದ್ದ **73** ಸೆಂಟ್ **4** ರಿಂದ **6** ನೇ ಪ್ರತಿವಾದಿಗಳ ಸ್ವಾದೀನಕ್ಕೆ ಬಂದಿರುತ್ತದೆ ಎಂದರೆ ಸರಿ. ಆದ್ದರಿಂದ ಸರ್ವೆ ನಂ.**70/4** ರ **73**

ಸೆಂಟ್‌ಗೆ ನಮಗೆ ಯಾವುದೇ ಹಕ್ಕು ಇಧಿಕಾರ ಇಲ್ಲ ಎಂದರೆ ಸರಿ. ನನಗೆ ಗೊತ್ತಿಲ್ಲದಂತೆ ಖಾತೆ ಮಾಡಿ ಕೊಂಡಿರುತ್ತಾರೆ.

1 ರಿಂದ 6ನೇ ಪ್ರತಿವಾದಿಗಳು ನಿಪಿ 12 ರಂತೆ ಪಾಲು ಮಾಡಿಕೊಂಡಾಗ ಸರ್ವೆ ನಂ.70/4 ರಲ್ಲಿ 98 ಸೆಂಟ್ ಪೈಕಿ 73 ಸೆಂಟ್ ರವೀಂದ್ರನ ಪಾಲಿಗೆ ಹೋಗಿದೆ, ಉಳಿಕೆ 19 ಸೆಂಟ್ ನನ್ನ ತಾಯಿ ಕೆಂಚಮ್ಮನಿಗೆ ಬಂದಿದೆ ಎಂದರೆ ಸರಿ. 73 ಸೆಂಟ್ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಉಳಿಕೆ 19 ಸೆಂಟ್ ನನ್ನ ತಂದೆಯ ಭಾಗಕ್ಕೆ ಬಂದ ಆಸ್ತಿ ಎಂದರೆ ಸರಿ. ವಿಭಾಗ ಪತ್ರ ಆದ 4-5 ದಿನಗಳ ನಂತರ ಆ ವಿಚಾರ ನನಗೆ ತಿಳಿದಿರುತ್ತದೆ. ವಿಭಾಗ ಪತ್ರದ ಆಧಾರದಲ್ಲಿ ದಿಃ06-02-2024 ರಂದು ಸರ್ವೆನಂ.70/4 ರ 73 ಸೆಂಟ್ ರಕ್ಷಿತ್ ಹೆಸರಿಗೆ ಮತ್ತು 19 ಸೆಂಟ್ ಕೆಂಚಮ್ಮನ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ.

ನನ್ನ ಮತ್ತು ನನ್ನ ತಾಯಿ ಪಾಲಿಗೆ ಬಂದ 19 ಸೆಂಟ್ ಜಾಗವನು ಸರ್ವೆ ನಂ.70/4 ಅನ್ನು ಪೋಡ್ ಮಾಡಿ ಸರ್ವೆ ನಂ.70/31 ಹೊಸ ನಂಬರ್ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ70/31 ಈಗಲೂ ನನ್ನ ತಾಯಿ ಹೆಸರಿನಲ್ಲಿದೆ ಎಂದರೆ ಸರಿ. ಆದರೆ ಇನ್ನೂ ಜಾಗ ಬರಬೇಕೆಂದು ನನ್ನ ತಾಯಿ ಹೇಳುತ್ತಿದ್ದರು. ಸದರಿ ಪಹಣಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ವಿಚಾರವನು ನನ್ನ ತಂದೆ ಹೇಳುತ್ತಿದ್ದರು. ಎಷ್ಟು ಜಾಗ ಬರಬೇಕೆಂದು ಹೇಳಿರುವುದಿಲ್ಲ. ಅದರ ಬಗ್ಗೆ ಕಾನೂನು ಕ್ರಮ

ತೆಗೆದುಕೊಂಡಿಲ್ಲ. ಸರ್ವೆ ನಂ.**70/4** ರಲ್ಲಿ **19** ಸೆಂಟ್ ಆಸ್ತಿ ಅಲ್ಲದೇ ಯಾವುದೇ ಆಸ್ತಿ ಬರಬೇಕಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಸದರಿ **19** ಸೆಂಟ್ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಯಾವ ಕಾರಣಕ್ಕೆ ಸೇರಿಸಿಲ್ಲ ಎಂದರೆ ಸೇರಿಸಬೇಕೆಂದು ಇದ್ದೇವು ಆದರೆ ಸೇರಿಲ್ಲ. **4** ರಿಂದ **6**ನೇ ಪ್ರತಿವಾದಿಗಳ ಆಸ್ತಿಯನ್ನು ಹೊಡೆದು ಕೊಳ್ಳಲು ಆ ಆಸ್ತಿಯನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ದಿಃ**16-01-2024** ರಲ್ಲಿ ಆಗಿರುವ ನಿಪಿ **12** ಸರ್ವೆ ನಂ.**70/4**ಕ್ಕೆ ಸಂಬಂಧಿಸಿದಂತೆ ನನಗಾಗಲೀ, ಉಳಿದ ಪ್ರತಿವಾದಿಗಳಿಗೆ ಅದರ ಮೇಲೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆ ವಿಭಾಗ ಪತ್ರ ಬದ್ದವಾಗಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗ ಪತ್ರ ರವೀಂದ್ರನ ಪಾಲಿಗೆ ಬಂದ ಆಸ್ತಿ ಅದರ ಬಗ್ಗೆ ಮಾತ್ರ ಪಾಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ, ನನ್ನ ಸಹೋದರರಾದ **2** ಮತ್ತು **3**ನೇ ಪ್ರತಿವಾದಿಗಳ ಒಪ್ಪಿಗೆ ಮೇರೆಗೆ ವಿಭಾಗ ಪತ್ರ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗ ಪತ್ರದಲ್ಲಿರುವ ಆಸ್ತಿಗಳ ಮೇಲೆ ನನಗೆ, ನನ್ನ ತಂದೆಗೆ, ನಮ್ಮ ಕುಟುಂಬದವರಿಗೆ ಸಂಬಂಧ ಪಡದ ಕಾರಣ ನನ್ನನ್ನು ವಿಭಾಗ ಪತ್ರದಲ್ಲಿ ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನ ಮದುವೆ **1992** ರಲ್ಲಿ ಆಗಿರುತ್ತದೆ. ಸಕಲೇಶಪುರ ತಾಲ್ಲೂಕು, ಬ್ಯಾಗಡಹಳ್ಳಿ ಗ್ರಾಮಕ್ಕೆ ಮದುವೆ ಆಗಿರುತ್ತದೆ. ಮದುವೆ ಆದಾಗಿನಿಂದ ಅಲ್ಲೇ ವಾಸವಾಗಿರುತ್ತೇನೆ. ನನ್ನ ತಂದೆಗೆ ನಾನು ಒಬ್ಬಳೇ ಮಗಳಾಗಿರುತ್ತೇನೆ. ನನ್ನ

ಮದುವೆಯಾದಾಗ ನನಗೆ **24** ವರ್ಷ ವಯಸ್ಸು. ನಾನು ತುಂಬಾ ವರ್ಷಗಳ ಹಿಂದೆ ಮದುವೆಯಾಗಿ ಗಂಡನ ಮನೆಯಲ್ಲಿ ಖಾಯಂ ಆಗಿ ವಾಸವಿದ್ದ ಕಾರಣ ನಮ್ಮ ಕುಟುಂಬದ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾವಾ ಆಸ್ತಿಗಳು ಕಾಳಿಂಗಪ್ಪ ರವರ ಹೆಸರಿನಲ್ಲಿದ್ದ ಬಗ್ಗೆ ದಾಖಲೆ ಇಲ್ಲ. ನನ್ನ ತಂದೆ ಮರಣ ಹೊಂದಿದ್ದರಿಂದ ಸರ್ವೆ ನಂ.**70/4** ರ ಆಸ್ತಿ ನನ್ನ ತಾಯಿ ಹೆಸರಿಗೆ ಬದಲಾವಣೆ ಆದ ಬಗ್ಗೆ ದಾಖಲೆ ಇಲ್ಲ. ಸರ್ವೆ ನಂ.**70/4** ನನ್ನ ತಂದೆ ಹೆಸರಿನಲ್ಲಿ ಯಾವುದೇ ಸಮಯದಲ್ಲಿ ಖಾತೆ ಇರಲಿಲ್ಲ ಅದು ರವೀದ್ರ ರವರ ಹೆಸರಿನಲ್ಲಿತ್ತು ಎಂದರೆ ಅದು ಅವರ ತೋಟ ಆದ ಕಾರಣ ಅವರ ಹೆಸರಿನಲ್ಲಿತ್ತು.

ದಾವಾ ಆಸ್ತಿಗಳ ಕಾಳಿಂಗಪ್ಪ ರವರ ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆ ಇಲ್ಲ. ಸರ್ವೆ ನಂ.**70/4** ರ ಖಾತೆ **4** ರಿಂದ **6** ನೇ ಪ್ರತಿವಾದಿಗಳಿಗೆ ಬದಲಾವಣೆಯಾದ ವಿಚಾರ ನ್ಯಾಯಾಲಯದ ದಾಖಲೆ ನೋಡಿದಾಗ ಗೊತ್ತಾಗಿರುತ್ತದೆ. ಖಾತೆ ಬದಲಾವಣೆ ಮಾಡಿದ ಬಗ್ಗೆ ಮೇಲ್ಮನವಿ ಸಲ್ಲಿಸಿಲ್ಲ. **4** ವರ್ಷದ ಹಿಂದೆ ಪಾಲು ಕೊಡಿ ಎಂದ ಪಂಚಾಯಿತಿ ಮಾಡಿರುತ್ತೇವೆ. ದಿನಾಂಕ, ತಿಂಗಳು, ವರ್ಷ ಗೊತ್ತಿಲ್ಲ. ಪಂಚಾಯಿತಿಯಲ್ಲಿ ಬೋಜಪ್ಪ, ರಾಜಪ್ಪ, ಸುನೀಲ ಇದ್ದರು, ಅವರೆಲ್ಲರೂ ಈಗ ಜೀವಂತ ಇದ್ದರು. ಪಂಚಾಯಿತಿಯಾಗಿದೆ ಎಂದು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ**21-03-2023** ಪ್ರತಿವಾದಿಗಳಿಗೆ ನಮ್ಮ ವಕೀಲರಾದ ಹೇಮಚಂದ್ರ ರವರಿಂದ ನೋಟಿಸು ಕೊಡಿಸಿರುತ್ತೇನೆ. ಸದರಿ ನೋಟಿಸು ತಲುಪಿದ ಬಗ್ಗೆ ದಾಖಲೆ

ಇರುತ್ತದೆ. ನಾನು ಆ ರೀತಿ ಯಾವುದೇ ನೋಟಿಸು ಕೊಟ್ಟಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ವಾದ ಪತ್ರದ ಪ್ಯಾರಾ 7 ರಲ್ಲಿ ಸುಳ್ಳು ಆಪಾದನೆಗಳನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಿಭಾಗ ಪತ್ರ ಆದ ಎರಡೇ ದಿನಕ್ಕೆ ನನಗೆ ಗೊತ್ತಾಗಿದೆ ಎಂಬ ವಿಷಯವನ್ನು ದಾವಾ ಹಾಕುವ ಕಾಲಕ್ಕೆ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ. ದಾವಾ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಆ ವಿಚಾರ ತಿಳಿಸಿಲ್ಲ ಎಂದರೆ ಸರಿಯಲ್ಲ. ನಿಪಿ 12 ರಲ್ಲಿ ನನ್ನ ಸಹೋದರರಿಗೆ ತಲಾ 30 ಸಾವಿರ ಕೊಟ್ಟಿರುವುದಾಗಿ ತೋರಿಸಿರುವುದರಿಂದ ಸರ್ವೆ ನಂ.70/4 ರ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನ ಪಟ್ಟಿರುತ್ತಾರೆ ಎಂದು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ. ಸರ್ವೆ ನಂ.70/4 ನ್ನು 4 ರಿಂದ 6 ನೇ ಪ್ರತಿವಾದಿಗಳು ಯಾವಾಗಲೂ ಮಾರಾಟ ಮಾಡಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ. 2, 3 ನೇ ಪ್ರತಿವಾದಿಗಳಿಗೆ 30 ಸಾವಿರ ಕೊಟ್ಟ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.70/4 ರ 73 ಸೆಂಟ್ ನಮ್ಮ ಸ್ವಾದೀನ ಯಾವ ಕಾಲದಲ್ಲೂ ಇಲ್ಲ ಎಂದರೆ ಸರಿ. ನನ್ನ ತಂದೆ ಸ್ವಾದೀನದಲ್ಲಿ ಕೇವಲ 19 ಸೆಂಟ್ ಮಾತ್ರ ಇತ್ತು ಎಂದರೆ ನನಗೆ ಗೊತ್ತಿಲ್ಲ.

ಆ ಕಾರಣದಿಂದ ದಾವಾ ಐಟಂ ನಂ.4 ರಲ್ಲಿ 73 ಸೆಂಟ್ ಗೆ ಯಾವುದೇ ಭಾಗಾಂಶ ಮತ್ತು ಲಾಭಾಂಶ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2, 3 ನೇ ಪ್ರತಿವಾದಿಗಳು ನನ್ನ ತಾಯಿ ಜೊತೆ ವಾಸವಾಗಿಲ್ಲ. ನನ್ನ ಮತ್ತು ನಮ್ಮ

ಸಹೋದರರ ವಿರುದ್ಧ ಯಾವುದೇ ವಿರೋಧ ಇರುತ್ತದೆ. ನನಗೆ ದಾವಾ ಐಟಂ ನಂ. 4 ರಲ್ಲಿ 4 ರಿಂದ 6ನೇ ಪ್ರತಿವಾದಿಗಳ ಪಾಲಿನ 73 ಸೆಂಟ್ ಬಿಟ್ಟು ಉಳಿದ ಆಸ್ತಿಯಲ್ಲಿ ನನಗೆ ಪಾಲು ಇದೆ ಎಂದರೆ ಸರಿ. ಆದರೂ ಕೂಡ ಇವರ ಪಾಲಿನ ಆಸ್ತಿಯನ್ನು ದಾವೆಯಲ್ಲಿ ಸೇರಿಸಿ ತೊಂದರೆ ಕೊಡಲು ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಹಾಕುವ ಕಾಲಕ್ಕೆ ಸರ್ವೆ ನಂ.70/4 ರಲ್ಲಿ 76 ಸೆಂಟ್ 4 ರಿಂದ 6ನೇ ಪ್ರತಿವಾದಿ ಹೆಸರಿನಲ್ಲಿ ಸರ್ವೆ ನಂ.70/31 ರಲ್ಲಿ 19 ಸೆಂಟ್ ನನ್ನ ತಾಯಿ ಹೆಸರಿನಲ್ಲಿದೆ ಎಂದರೆ ಸರಿ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಗಿದೆ**).**

ಸಹಿ/-
**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**